ದಿನಾಂಕ: 02-02-2023ರ ಗುರುವಾರ ಅಪರಾಹ್ನ 03.00ಗಂಟೆಗೆ 2022-23ನೇ ಸಾಲಿನ ಯುವರಾಜ ಕಾಲೇಜು(ಸ್ವಾಯತ್ತ) ಆಡಳಿತ ಮಂಡಳಿ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಯುವರಾಜು ಕಾಲೇಜಿನ ಪ್ರಾಂಶುಪಾಲರ ಕಛೇರಿಯಲ್ಲಿ ಏರ್ಪಡಿಸಲಾಗಿದ್ದ ಸಭೆಯ ನಡವಳಿ.

**ಹಾಜರಿದ್ದ ಸದಸ್ಯರುಗಳು**

| | | |
|---|---|---|
| **01** | **ಪ್ರೊ ಹೆಚ್ ರಾಜಶೇಖರ್**<br>ಮಾನ್ಯ ಕುಲಪತಿಗಳು<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | **ಅಧ್ಯಕ್ಷರು** |
| **02** | **ಶ್ರೀಮತಿ ವಿ ಆರ್ ಶೈಲಜ**<br>ಮಾನ್ಯ ಕುಲಸಚಿವರು<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | **ಸದಸ್ಯರು** |
| **03** | **ಪ್ರೊ. ಡಿ ಆರ್ ಜಯಪ್ರಕಾಶ್**<br>ಪ್ರಾಧ್ಯಾಪಕರು, ಹಿಂದಿ ವಿಭಾಗ,<br>ಯುವರಾಜ ಕಾಲೇಜು, ಮೈಸೂರು | **ಸದಸ್ಯರು** |
| **04** | **ಪ್ರೊ ಎಸ್ ಮಹದೇವಮೂರ್ತಿ**<br>ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ವಿಭಾಗ<br>ಯುವರಾಜ ಕಾಲೇಜು, ಮೈಸೂರು | **ಸದಸ್ಯರು** |
| **05** | ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ<br>ಮೈಸೂರು | **ಸದಸ್ಯರು** |
| **06** | **ಪ್ರೊ. ಎಂ ಎಲ್ ಅಶೋಕ,**<br>ಪ್ರಾಧ್ಯಾಪಕರು, ವಾಣಿಜ್ಯ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು | **ಸದಸ್ಯರು** |
| **07** | **ಪ್ರೊ. ಹೆಚ್ ಸಿ ದೇವರಾಜೇಗೌಡ**<br>ಪ್ರಾಂಶುಪಾಲರು<br>ಯುವರಾಜ ಕಾಲೇಜು, ಮೈಸೂರು | ಪದನಿಮಿತ್ತ ಸದಸ್ಯ<br>**ಕಾರ್ಯದರ್ಶಿ** |

**ಗೈರು ಹಾಜರಾದ ಸದಸ್ಯರು**

| | | |
|---|---|---|
| **01** | **ಯುಜಿಸಿ ನಾಮನಿರ್ದೇನ** | **ಸದಸ್ಯರು** |

ಮೊದಲನೆಯದಾಗಿ, ಯುವರಾಜ ಕಾಲೇಜಿನ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯವರಾದ ಪ್ರೊ. ಹೆಚ್ ಸಿ ದೇವರಾಜೇಗೌಡರವರು ಸಭೆಯಲ್ಲಿ ಭಾಗವಹಿಸಿದ್ದ ಯುವರಾಜ ಕಾಲೇಜಿನ ಆಡಳಿತ ಮಂಡಳಿಯ ಸಮಿತಿಯ ಅಧ್ಯಕ್ಷರು ಆದ ಪ್ರೊ. ಹೆಚ್ ರಾಜಶೇಖರ್, ಗೌರವಾನ್ವಿತ ಮಾನ್ಯ ಕುಲಪತಿರವರನ್ನು ಸ್ವಾಗತಿಸಿದರು, ಸಮಿತಿಯ ಸದಸ್ಯರಾದ ಶ್ರೀಮತಿ. ವಿ ಆರ್ ಶೈಲಜ, ಮಾನ್ಯ ಕುಲಸಚಿವರನ್ನು ಹಾಗೂ ಇತರೆ ಸಮಿತಿಯ ಸದ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಯುವರಾಜ ಕಾಲೇಜು ಹಿಂದಿನಿಂದ ಹಾದು ಬಂದ ದಾರಿಯ ಕುರಿತು ಸೂಕ್ಷ್ಮವಾಗಿ ಸಭೆಯಲ್ಲಿ ಮಂಡಿಸಿದರು.

ತದನಂತರ ಪ್ರೊ. ಹೆಚ್ ಸಿ ದೇವರಾಜೇಗೌಡರವರು ಮಾನ್ಯ ಕುಲಪತಿರವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

| ಕ್ರಮ ಸಂ. | ವಿಷಯ ಸಂಕ್ಷಿಪ್ತವಾಗಿ |
|---|---|
| 2023/ಜಿ.ಬಿ.1 | 2022–23ನೇ ಸಾಲಿನ ದಿನಾಂಕ: 13-01-2023ರ ಶೈಕ್ಷಣಿಕ ಮಂಡಳಿ ಸಮಿತಿ ಸಭಾ ನಡವಳಿಗಳ ಅನುಮೋದನೆ ಬಗ್ಗೆ (ಅನುಬಂಧ-I) |
| ತೀರ್ಮಾನ | 2022–23ನೇ ಸಾಲಿನ ದಿನಾಂಕ: 13-01-2023ರ ಶೈಕ್ಷಣಿಕ ಮಂಡಳಿ ಸಮಿತಿ ಸಭಾ ನಡವಳಿಯನ್ನು ಸಮಿತಿಯಲ್ಲಿನ ಸದಸ್ಯರನ್ನು ಸೇರಿಸಿ ಎಂದು ಅನುಮೋದಿಸಿತು. |
| 2023/ಜಿ.ಬಿ.2 | 2022–23ನೇ ಸಾಲಿನ ದಿನಾಂಕ: 16-01-2023ರ ಹಣಕಾಸು ಸಮಿತಿ ಸಭಾ ನಡವಳಿಗಳ ಅನುಮೋದನೆ ಬಗ್ಗೆ (ಅನುಬಂಧ-II) |
| ತೀರ್ಮಾನ | 2022–23ನೇ ಸಾಲಿನ ದಿನಾಂಕ: 16-01-2023ರ ಹಣಕಾಸು ಸಮಿತಿ ಸಭಾ ನಡವಳಿಯನ್ನು ಸಮಿತಿಯು ಅನುಮೋದಿಸಿತು. |
| 2023/ಜಿ.ಬಿ.3 | 2016–17 ರಿಂದ 2022–23 ರವರೆಗೆ Autonomous grant ಸ್ಥಗಿತಗೊಂಡಿದ್ದು ಸದರಿ Grant ಪಡೆಯುವ ಬಗೆಗೆ ಯುಸಿಗಳನ್ನು ಯುಜಿಸಿಗೆ ಸಲ್ಲಿಸಿ, ಸದರಿ Autonomous grant ಪಡೆಯುವುದಕ್ಕೆ ಪ್ರಯತ್ನಿಸಿಸುವುದು. |
| 2023/ಜಿ.ಬಿ.4 | Ladies Hostel construction ಆಗಿರುವುದರಿಂದ UGCಗೆ Occupancy Certificate and Local Authority Certificate ಪಡೆಯುವ ಬಗೆಗೆ. |
| 2023/ಜಿ.ಬಿ.5 | Sports Indoor Stadium Construction ಆಗಿರುವುದರಿಂದ UGC Occupancy Certificate ಹಾಗೂ local Authority Certificate ಪಡೆಯುವ ಬಗೆಗೆ. |
| 2023/ಜಿ.ಬಿ.6 | Project, CPE ಇತರೆ UC ಸಲ್ಲಿಸದೇ ಇರುವುದರಿಂದ ಯುವರಾಜ ಕಾಲೇಜು(ಸ್ವಾಯತ್ತತೆ)ಯ 02(F) & 12(B) ನಿಲ್ಲಿಸುವುದು ಎಂದು UC ಯಿಂದ ಪತ್ರ ಬಂದಿರುವ ಬಗೆಗೆ. |
| | **ಕ್ರಮಸಂಖ್ಯೆ: 2023/ಜಿ.ಬಿ. 03, 04, 05, 06ರ ಚರ್ಚೆ**<br><br>2013ರಲ್ಲಿ ಯುವರಾಜ ಕಾಲೇಜಿನಲ್ಲಿ Ladies Hostel construction ಮಾಡಲಾಗಿದೆ. ಇದಕ್ಕೆ ಸಂಬಂಧಿಸಿಂತೆ UC ಸಲ್ಲಿಸದೇ ಇರುವುದರಿಂದ ಮತ್ತು Sports Indoor Construction , Project, CPE ಇವುಗಳ UC ಸಲ್ಲಿಸದೆ ಇರುವುದರಿಂದ Autonomous grant ಬಂದಿರುವುದಿಲ್ಲ ಹಾಗೂ ಕಟ್ಟಡಕ್ಕೆ ಸಂಬಂಧಿಸಿದಂತೆ Plan Approval ಸಹ ಪಡೆದಿರುವುದಿಲ್ಲ ಎಂದು ಯುಜಿಸಿ ತಿಳಿಸಿರುತ್ತದೆ. ಇದರ ಸಂಬಂಧವಾಗಿ ಒಂದು ಸಮಿತಿ ಮಾಡಿಕೊಂಡು ಯುಜಿಸಿಗೆ ಬೇಟಿ ನೀಡಿದ್ದಾಗ ಯುಜಿಸಿಯವರು ತಿಳಿಸಿದ್ದು ಏನೆಂದರೆ ಕಾಲೇಜಿನಿಂದ ಯುಸಿ ಸಲ್ಲಿಸದ ಕಾರಣ Autonomous grant |

| | |
|---|---|
| | ನೀಡಿರುವುದಿಲ್ಲ ತಕ್ಷಣ ಯುಸಿ ನೀಡುವಂತೆ ತಿಳಿಸಿರುತ್ತಾರೆ. ಅಥವಾ ವಿಸಿ ಬದಲಾಗಿ ಲೋಕಲ್ ಪ್ರಾಧಿಕಾರದಿಂದ UGCಗೆ Occupancy Certificate ಹಾಗೂ local Authority Certificate ನೀಡುವಂತೆ ತಿಳಿಸಿರುತ್ತಾರೆ.<br><br>**ಕುಲಸಚಿವರು**– ಕಟ್ಟಡಕ್ಕೆ ಸಂಬಂಧಿಸಿದಂತೆ Plan Approval ಮಹಾನಗರ ಪಾಲಿಕೆಯಲ್ಲಿ ಸರ್ಕಾರದ ದೊಡ್ಡ ದೊಡ್ಡ ವಿದ್ಯಾಸಂಸ್ಥೆ ಸ್ಥಾಪನೆ ಸಮಯದಲ್ಲಿ Plan Approval ಅವಶ್ಯಕತೆ ಇರುವುದಿಲ್ಲ ಎಂದು ಕಾಣುತ್ತದೆ ಇದರ ಬಗ್ಗೆ ಪರಿಶೀಲಿಸಬೇಕಾಗಿ ತಿಳಿಸಿದರು. ಇದರ ಬದಲಾಗಿ ಕಟ್ಟಡಕ್ಕೆ ಸಂಬಂಧಿಸಿದ ಬೈಲಾವನ್ನು ಯುಜಿಸಿಗೆ ಸಲ್ಲಿಸಲು ಸೂಚಿಸಿದರು.<br><br>**ಅಧ್ಯಕ್ಷರು**:– ಯುವರಾಜ ಕಾಲೇಜು(ಸ್ವಾಯತ್ತತೆ)ಯ 02(F) & 12(B) ನಿಲ್ಲಿಸುವುದು ಮುಂದಿನ ದಿನಗಳಲ್ಲಿ ಯುಜಿಸಿಯಿಂದ ಸ್ವಾಯತ್ತತೆ ಪಡೆಯುವುದು ಕಷ್ಟಕರವಾಗುತ್ತದೆ ಕೂಡಲೆ ಕ್ರಮ ಕೈಗೊಳ್ಳುವುದಕ್ಕೆ ಪ್ರಾಂಶುಪಾಲರಿಗೆ ಸೂಚಿಸಿದರು. |
| ತೀರ್ಮಾನ | Ladies Hostel construction ಕಟ್ಟಡಕ್ಕೆ ಸಂಬಂಧಿಸಿದ ಬೈಲಾವನ್ನು ಯುಜಿಸಿಗೆ ಸಲ್ಲಿಸುವಂತೆ ಹಾಗೂ Sports Indoor Construction , Project, CPE ಯುಸಿ ಅನ್ನು ಸಲ್ಲಿಸುವುದಕ್ಕೆ ಕ್ರಮ ಕೈಗೊಳ್ಳುವಂತೆ ಸಮಿತಿಯು ಸೂಚಿಸಿತು. |
| 2023/ಜಿ.ಬಿ.7 | Canteen ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದರೂ ಸಹ ಅನಾಮದೇಯ ಹೆಸರಿನಲ್ಲಿ Canteen ನಡೆಯುತ್ತಿರುವ ಬಗೆಗೆ. |
| | **ಪ್ರಾಂಶುಪಾಲರು**– ಯುವರಾಜ ಕಾಲೇಜಿನ ಆವರಣದಲ್ಲಿ ಕ್ಯಾಂಟಿನ್ ನಡೆಯುತಿದ್ದು, ಪುಟ್ಟರಾಜು ಎಂಬುವವರು ಕ್ಯಾಂಟಿನ್ ಟೆಂಡರ್ ಪಡೆದುಕೊಂಡಿರುವ ವ್ಯಕ್ತಿ ಮತ್ತು ಸುರೇಶ್ ಗೌಡ ಎಂಬುವವರು ಕ್ಯಾಂಟಿನ್ ನಡೆಸುತ್ತಿರುವ ವ್ಯಕ್ತಿ ಇಬ್ಬರು ಬೇರೆಯವರು ಆಗಿರುತ್ತಾರೆ. ಟೆಂಡರ್ ಪಡೆದಿರುವ ಪುಟ್ಟರಾಜುರವರ ಟೆಂಡರ್ ಮುಕ್ತಾಯವಾಗಿದ್ದರೂ ಸಹ ಕ್ಯಾಂಟಿನ್ ಬಿಟ್ಟುಕೊಟ್ಟಿರುವುದಿಲ್ಲ, ಹಿಂದಿನ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು 06ತಿಂಗಳ ಕಾಲ ಕ್ಯಾಂಟಿನ್ ನಡೆಸುವುದಕ್ಕೆ ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.<br><br>**ಕುಲಸಚಿವರು**– 06 ತಿಂಗಳ ಕಾಲ ಕ್ಯಾಂಟಿನ್ ನಡೆಸುವುದಕ್ಕೆ ಪತ್ರ ನೀಡಲಾಗಿದೆ ಎಂದು ಪ್ರಶ್ನಿಸಿದರು, ಇದಕ್ಕುತ್ತರವಾಗಿ ಯುವರಾಜ ಕಾಲೇಜಿನ ಪ್ರಾಂಶುಪಾಲರು ಕಡತದಲ್ಲಿ ತಿಳಿಸಿರುವುದಾಗಿ ತಿಳಿಸಿದರು. ಕ್ಯಾಂಟಿನ್ ನಡೆಸುವವರಲ್ಲಿ ಮುಚ್ಚಳಿಕೆ ಪತ್ರವನ್ನು ಬರೆಸಿಕೊಳ್ಳಬೇಕು ಹಾಗೂ ಆದಷ್ಟು ಬೇಗ ಕ್ಯಾಂಟಿನ್‌ನ ಮರು ಟೆಂಡರ್ ಕರೆಯುವುದಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು. |
| ತೀರ್ಮಾನ | **ಅಧ್ಯಕ್ಷರು**– ಯುವರಾಜ ಕಾಲೇಜಿನ ಆವರಣದಲ್ಲಿ ಕ್ಯಾಂಟಿನ್ ಅನಾಮದೇಯ ವ್ಯಕ್ತಿ ನಡೆಸುತಿದ್ದಾರೆ ಎಂದು ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆಯ ನೋಟೀಸ್ ನೀಡುವುದಕ್ಕೆ ತಿಳಿಸಿದರು. ಇದಕ್ಕೆ ಸಮಿತಿಯು ಒಪ್ಪಿಗೆ ಸೂಚಿಸಿರುತ್ತದೆ. |
| 2023/ಜಿ.ಬಿ.8 | Sport Indoor Stadium ಯುವರಾಜ ಕಾಲೇಜಿಗೆ ಸಂಬಂಧಪಟ್ಟಿದ್ದರೂ ಸಹ ಯುವರಾಜ ಕಾಲೇಜಿನ ವಿದ್ಯಾರ್ಥಿಗಳಿಗೆ ಉಪಯೋಗವಾಗದೆ ಇರುವುದನ್ನು |

| | |
|---|---|
| | ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಮೌಖಿಕವಾಗಿ ದೂರು ನೀಡಿರುವ ಬಗೆಗೆ ಕಾಲೇಜಿನ ಕೌನ್ಸಿಲ್ ತೀರ್ಮಾನದ ಪ್ರಕಾರ ಕಾಲೇಜಿನ ವಶಕ್ಕೆ ಪಡೆಯುವ ಬಗೆಗೆ. |
| | **ಪ್ರಾಂಶುಪಾಲರು–** ಯುವರಾಜ ಕಾಲೇಜು ನಿರ್ಮಿಸಿರುವ Sport Indoor Stadium ಅನ್ನು ದೈಹಿಕ ಶಿಕ್ಷಣ ವಿಭಾಗ ಇದರ ಎಲ್ಲಾ ಉಪಯೋಗ ಪಡೆದುಕೊಳ್ಳುತ್ತಿದೆ. ಇದರ ಆದಾಯ ಕೂಡ ನಮ್ಮ ಕಾಲೇಜಿಗೆ ಬಂದರೆ ಕಾಲೇಜಿನ ಆದಾಯದ ತೊಂದರೆ ಕಡಿಮೆಯಾಗುವುದು ಎಂದು ತಿಳಿಸಿದರು. |
| ತೀರ್ಮಾನ | Sport Indoor Stadium ಯುವರಾಜ ಕಾಲೇಜಿಗೆ ಹಸ್ತಾಂತರಿಸುವಂತೆ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯುವಂತೆ ಮಾನ್ಯ ಕುಲಪತಿಗಳು ಸೂಚಿಸಿದರು. |
| 2023/ಜಿ.ಬಿ.9 | Contract basis ನಲ್ಲಿ Appoint ಆಗಿರುವ ಪ್ರಾಧ್ಯಾಪಕರುಗಳ workload ಬಗೆಗೆ . |
| | **ಪ್ರೊ. ಡಿ.ಆರ್ ಜಯಪ್ರಕಾಶ್–** ಗುತ್ತಿಗೆ ಆಧಾರಿತ (Contract basis) ಉಪನ್ಯಾಸಕರು ಕೋರ್ಟ್ ಮೋರೆ ಹೋಗಿರುತ್ತಾರೆ ಹಾಗೂ ಗುತ್ತಿಗೆ ಉಪನ್ಯಾಸಕರುಗಳಿಗೆ ಕೋರ್ಟ್ ಮಧ್ಯಾಂತರ ಆದೇಶವಾಗಿದೆ. ಅವರ ಚರ್ಚೆ ತೆಗೆದುಕೊಳ್ಳುವುದು ತಪ್ಪಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಇದಕ್ಕುತ್ತರವಾಗಿ **ಅಧ್ಯಕ್ಷರು** ಮಾತನಾಡಿ, ಅವರ ಕಾರ್ಯಭಾರದ ಚರ್ಚೆ ಮಾಡಲಾಗುತ್ತದೆ ವಿನಹ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಸಭೆಯಲ್ಲಿ ಸ್ಪಷ್ಟಪಡಿಸಿದರು.<br><br>**ಪ್ರಾಂಶುಪಾಲರು–** ನಮ್ಮಲ್ಲಿ ಅತಿಥಿ ಉಪನ್ಯಾಸಕರು ಅವಶ್ಯಕತೆಗಿಂತ ಹೆಚ್ಚಾಗಿ ನೇಮಕ ಮಾಡಿರುತ್ತಾರೆ, ಇದಕ್ಕೆ ಕಾರಣ ವಿಭಾಗದಲ್ಲಿ ಕಾರ್ಯಭಾರಗಳ ಹಂಚಿಕೆ ಸರಿಯಾಗಿ ಮಾಡದಿರುವುದು, ವಿಭಾಗದಲ್ಲಿ ಕಾರ್ಯಭಾರಗಳ ಮಾಹಿತಿಯನ್ನು ಸ್ಪಷ್ಟವಾಗಿ ನೀಡಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.<br><br>**ಕುಲಸಚಿವರು–** ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ತಾವು ತಮ್ಮ ಅಧಿಕಾರವನ್ನು ಬಳಸಿಕೊಂಡು ಸ್ಪಷ್ಟವಾದ ವಿವರಗಳೊಂದಿಗೆ ವಿಭಾಗದ ಕಾರ್ಯಭಾರವನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯಕ್ಕೆ ಅತಿಥಿ ಉಪನ್ಯಾಸಕರ ಅವಶ್ಯಕತೆ ತಿಳಿಸಬೇಕು ಅದರಂತೆ ವಿಶ್ವವಿದ್ಯಾನಿಲಯವು ನೇಮಕಾತಿ ಮಾಡುತ್ತದೆ. ಮುಂದಿನ ನೇಮಕಾತಿಗೆ ಅವಶ್ಯಕತೆಯನ್ನು ಪರಿಶೀಲಿಸಿ ನೇಮಕಾತಿ ಮಾಡಿಕೊಳ್ಳಬೇಕು ಎಂದು ಸೂಚಿಸಿರು. |
| ತೀರ್ಮಾನ | ವಿಶ್ವವಿದ್ಯಾನಿಲಯವು ತಮ್ಮ ತಮ್ಮ ವಿಭಾಗದ ಕಾರ್ಯಭಾರದ ಮೇಲೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತದೆ ಹಾಗೂ ಮೊದಲು ಖಾಯಂ ಪ್ರಾಧ್ಯಾಪಕರುಗಳಿಗೆ ಕಾರ್ಯಭಾರ ಹಂಚಿ, ನಂತರ ಸಂಶೋಧನ ವಿದ್ಯಾರ್ಥಿಗಳಿಗೆ ಹಂಚಿ ತದನಂತರ ಅತಿಥಿ ಉಪನ್ಯಾಸಕರುಗಳಿಗೆ ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತದೆ ಆದರೆ ಕಾರ್ಯಭಾರವಿಲ್ಲದ ವಿಭಾಗಕ್ಕೆ ಹೆಚ್ಚುವರಿಯಾಗಿ ನೇಮಕ ಮಾಡಬಾರದು ಎಂದು ಸಮಿತಿಯು ಸೂಚಿಸಿರುತ್ತದೆ. |
| 2023/ಜಿ.ಬಿ.10 | 04, 08 ಮತ್ತು 12 Hoursನ Guest Faculty ಪ್ರಾಧ್ಯಾಪಕರುಗಳ workload ಸರಿಯಾಗಿ ತೋರಿಸದೆ, ಈ ಹಿಂದೆ ಇರುವ ರೀತಿಯಲ್ಲಿಯೇ Continue ಆಗಿರುವುದರಿಂದ workload ವ್ಯತ್ಯಾಸದಿಂದ salary ಭರಿಸುವ ಬಗೆಗೆ. |
| | **ಪ್ರಾಂಶುಪಾಲರು–** ಯುವರಾಜ ಕಾಲೇಜಿನ ವಿಭಾಗದಲ್ಲಿ ಕಾರ್ಯಭಾರ ಸರಿಯಾಗಿ |

| | |
|---|---|
| | ಹಂಚದ ಕಾರಣ ಹೆಚ್ಚುವರಿಯಾಗಿ ಅತಿಥಿ ಉಪನ್ಯಾಸಕರು ನೇಮಕವಾಗಿರುತ್ತಾರೆ. ವಿಶ್ವವಿದ್ಯಾನಿಲಯ ಹಿಂದೆ ಇರುವ ರೀತಿಯಲ್ಲಿಯೇ ಅತಿಥಿ ಉಪನ್ಯಾಸಕರನ್ನು ಮುಂದುವರೆಸುವಂತೆ ತಿಳಿಸಿರುತ್ತದೆ ಇದರಿಂದ ನಮಗೆ ವೇತನ ನೀಡುವುದಕ್ಕೆ ತೊಂದರೆಯಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>**ಕುಲಸಚಿವರು–** ವಿಶ್ವವಿದ್ಯಾನಿಲಯ ತಮ್ಮ ವಿಭಾಗದ ಕಾರ್ಯಭಾರದ ಮೇಲೆ ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತದೆ ಹಾಗೂ ಮೊದಲು ಖಾಯಂ ಪ್ರಾಧ್ಯಾಪಕರುಗಳಿಗೆ ಕಾರ್ಯಭಾರ ಹಂಚಿ, ನಂತರ ಸಂಶೋಧನ ವಿದ್ಯಾರ್ಥಿಗಳಿಗೆ ಹಂಚಿ ತದನಂತರ ಅತಿಥಿ ಉಪನ್ಯಾಸಕರುಗಳಿಗೆ ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತದೆ. ಆದರೆ ಕಾರ್ಯಭಾರ ವಿಲ್ಲದ ವಿಭಾಗಕ್ಕೆ ಹೆಚ್ಚುವರಿಯಾಗಿ ನೇಮಕ ಮಾಡಿದ್ದರೆ ವೇತನಕ್ಕೆ ತೊಂದರೆಯಾಗುವುದು ಖಚಿತ ಎಂದು ತಿಳಿಸಿದರು.<br>ಎಲ್ಲಾ ವಿಭಾಗದ ಕಾರ್ಯಭಾರಗಳ ವರದಿಯನ್ನು ಪಡೆದುಕೊಂಡು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕು ಇದು ಪ್ರಾಂಶುಪಾಲರ ಕರ್ತವ್ಯ ಎಂದು ಸಭೆಯು ಸೂಚಿಸಿತು. |
| ತೀರ್ಮಾನ | ಸೆಮಿಸ್ಟರ್ ಮುಗಿಯುವುದಕ್ಕೆ ಒಂದು ತಿಂಗಳು ಬಾಕಿ ಇರುವ ಸಂದರ್ಭದಲ್ಲಿ ಹೆಚ್ಚುವರಿಯಾಗಿ ನೇಮಕವಾಗಿರುವ ಅತಿಥಿ ಉಪನ್ಯಾಸಕರುಗಳ ಸಮತೋಲನ ಮಾಡುವಂತೆ ಸಮಿತಿಯು ಸೂಚಿಸಿತು. |
| 2023/ಜಿ.ಬಿ.11 | PSFS ನಿಂದ ಸುಮಾರು ರೂ. 2,00,000/–(ಎರಡು ಕೋಟಿ) ಹಣ ಕಾಲೇಜಿಗೆ ಬರದಿದ್ದಲ್ಲಿ salaryಗೆ ರೂ.6,00,00,000/–(ಆರು ಕೋಟಿ) ಹಣ ಬೇಕಾಗಿರುತ್ತದೆ ಎಂದು ಹಣಕಾಸು ಸಮಿತಿಯಲ್ಲಿ ವಿವರಿಸಿರುವ ಬಗೆಗೆ. |
| ತೀರ್ಮಾನ | ಕಾಲೇಜಿನ ಆರ್ಥಿಕ ಪರಿಸ್ಥಿತಿಯು ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಮುಂದೆ PSFS ಮೊತ್ತವು ಮುಕ್ತಾಯವಾದಾಗ, ವಿಶ್ವವಿದ್ಯಾನಿಲಯದಿಂದ ಹಣವನ್ನು ಪಡೆದು, ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಿಕೊಳ್ಳಲು ಮಾನ್ಯ ಕುಲಪತಿಗಳು ಸೂಚಿಸಿದರು. |
| 2023/ಜಿ.ಬಿ.12 | ದಿನಾಂಕ: 20–01–2023ರಂದು ನಡೆದ Workshop for NEP at Bangaloreನ ಅನ್ವಯ NEP Cell ಪ್ರಾರಂಭ ಮಾಡುವ ಬಗೆಗೆ. |
| ತೀರ್ಮಾನ | ದಿನಾಂಕ: 20–01–2023ರಂದು ನಡೆದ Workshop for NEP at Bangaloreನ ಅನ್ವಯ NEP Cell ಪ್ರಾರಂಭ ಮಾಡುವುದಕ್ಕೆ ಸಮಿತಿಯು ಅನುಮೊದಿಸಿತು. |
| 2023/ಜಿ.ಬಿ.13 | NEP Cell ಪ್ರಾರಂಭಕ್ಕೆ ಬೇಕಾಗಿರುವ 02 Computer Technical hand, 04 Computer Desktop, 04 Tables and Chairs and Alluminium Partition. |
| ತೀರ್ಮಾನ | NEP Cell ಪ್ರಾರಂಭಕ್ಕೆ ಬೇಕಾಗಿರುವ 02 Computer Technical hand, 04 Computer Desktop, 04 Tables and Chairs and Alumni Participation ಗೆ ಆಂತರಿಕ ಸಂಪನ್ಮೂಲ/ಸಿಬ್ಬಂಧಿಗಳನ್ನು ಬಳಸಿಕೊಳ್ಳಲು ಸಮಿತಿಯು ತೀರ್ಮಾನಿಸಿತು. |
| 2023/ಜಿ.ಬಿ.14 | Holiday ಸಮಯದಲ್ಲಿ ಪಡೆಯುತ್ತಿರುವ EL ಗಳ ಬಗೆಗೆ. |
| | **ಯುವರಾಜ ಕಾಲೇಜಿನ ಪ್ರಾಂಶುಪಾಲರು–** ಯುವರಾಜ ಕಾಲೇಜಿನಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪ್ರಾಧ್ಯಾಪಕರುಗಳಿಗೆ ಬೇರೆ ಬೇರೆ ರೀತಿ ರಜಾದಿನಗಳು ಇರುತ್ತದೆ. **ಉದಾ:–** |

| | |
|---|---|
| | ಸದರಿ ಪ್ರಾಧ್ಯಾಪಕರುಗಳು ಸ್ನಾತಕ ವಿಭಾಗದಲ್ಲಿ 12 ಗಂಟೆಗಳ ಕಾರ್ಯಭಾರವನ್ನು ಮುಗಿಸಿ, ಸ್ನಾತಕೋತ್ತರ ವಿಭಾಗದಲ್ಲಿ 08 ಗಂಟೆಗಳ ಕಾರ್ಯಭಾರವನ್ನು ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ತಿಳಿಸಿ ELಗಳನ್ನು ಬಳಸಿಕೊಳ್ಳುತ್ತಿದ್ದಾರೆ.<br>**ಕುಲಸಚಿವರು–** ಅಧ್ಯಾಪಕರುಗಳ ಒಂದು ಎಸ್‌ಆರ್ ಹೊಂದಿದ್ದು ಅವರು ಒಂದೇ ರೀತಿ ELಗಳನ್ನು ಬಳಸಿಕೊಳ್ಳುವುದುಕ್ಕೆ ಸಾಧ್ಯ. ಇದರ ಕುರಿತಾಗಿ ಪರಿಶೀಲನೆ ನಡೆಸಿ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸುವುದಕ್ಕೆ ತಿಳಿಸಿದರು. |
| ತೀರ್ಮಾನ | ಅಧ್ಯಾಪಕರುಗಳ ಎಸ್‌ಆರ್ ಪರಿಶೀಲನೆ ನಡೆಸಿ ELಗಳ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸುವುದಕ್ಕೆ ಸಮಿತಿಯು ಸೂಚಿಸಿತು. |
| 2023/ಜಿ.ಬಿ.15 | CPE File ಗೆ ಆಡಳಿತಾಧಿಕಾರಿಯವರು ಹಿಂದಿನ ಸೇವಾವಧಿಯಲ್ಲಿ ಸಹಿ ಮಾಡಿರುವುದಿಲ್ಲ ಅವುಗಳ ಬಗೆಗೆ ಸಮಿತಿ ರಚಿಸುವ ಬಗೆಗೆ. |
| ತೀರ್ಮಾನ | ಯುವರಾಜ ಕಾಲೇಜು ಸ್ವಾಯತತ್ತೆ ಹೊಂದಿದ್ದು, ಕಾಲೇಜಿನ ಪ್ರಾಂಶುಪಾಲರಾದ ತಾವು ಇದರ ಕುರಿತು ಸಮಿತಿ ರಚಿಸಲು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯುವಂತೆ ಮಾನ್ಯ ಕುಲಪತಿಗಳು ಸೂಚಿಸಿದರು. |
| 2023/ಜಿ.ಬಿ.16 | Botany ವಿಭಾಗಕ್ಕೆ ಸಂಬಂಧಿಸಿದಂತೆ Supporting Pillar ಅಳವಡಿಸಿರುವುದರಿಂದ ಅದರ ಕಾಮಗಾರಿ ಬಗೆಗೆ. |
| ತೀರ್ಮಾನ | **ಅಧ್ಯಕ್ಷರು–** ಯುವರಾಜ ಕಾಲೇಜು ಕಟ್ಟಡ, ಶತಮಾನೋತ್ಸವ ಹೊಂದಿರುವ ಕಟ್ಟಡವಾಗಿರುವುದರಿಂದ, ಕಟ್ಟಡಗಳು ದುರಸ್ಥಿಗೆ ಕ್ರಮ ಕೈಗೊಳ್ಳುವುದು ಕಷ್ಟಕರ. ಇದರ ಬಗ್ಗೆ ಕಾರ್ಯಪಾಲಕ ಅಭಿಯಂತರರ ಬಳಿ ಚರ್ಚಿಸಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು ಎಂದು ತಿಳಿಸುತ್ತಾ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆಯಲು ಮಾನ್ಯ ಕುಲಪತಿಗಳು ತಿಳಿಸಿದರು. |
| 2023/ಜಿ.ಬಿ.17 | ಯುವರಾಜ ಕಾಲೇಜಿನ Research policyಯ ಅನುಮೋದನೆ ಬಗೆಗೆ (ಅನುಬಂಧ–III) |
| ತೀರ್ಮಾನ | ಯುವರಾಜ ಕಾಲೇಜಿನ Research policyಗೆ ಇನ್ನೂ ವಿವರವಾಗಿ ಬರೆಯುವಂತೆ ಸೂಚಿಸಿ ಸಮಿತಿಯು ಅನುಮೋದಿಸಿತು. |
| 2023/ಜಿ.ಬಿ.18 | ಕೆಲವು ನೌಕರರು Appoint ಆಗಿರೋದು ಯುವರಾಜ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವುದು ವಿಶ್ವವಿದ್ಯಾನಿಲಯದ ಬೇರೆ ಕಛೇರಿಯಲ್ಲಿ ಸಂಬಳ ನೀಡುತ್ತಿರುವುದು ಯುವರಾಜ ಕಾಲೇಜಿನಲ್ಲಿ ಇದರ ಅನುಮೋದನೆ ಬಗೆಗೆ. |
| ತೀರ್ಮಾನ | ಯುವರಾಜ ಕಾಲೇಜಿಲ್ಲಿ ನೇಮಕಾತಿ ಹೊಂದಿರುವ ಎಲ್ಲಾ ಸಿಬ್ಬಂಧಿಗಳನ್ನು ಕೂಡಲೇ ತಮ್ಮ ಮಾತೃಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಲು ಹಾಗೂ ಮಾತೃಸಂಸ್ಥೆಗೆ ಬಾರದಿರುವ ಸಿಬ್ಬಂಧಿಗಳಿಗೆ ನೋಟೀಸ್ ನೀಡುವಂತೆ ಸಮಿತಿಯು ಸೂಚಿಸಿರುತ್ತದೆ. |
| 2023/ಜಿ.ಬಿ.19 | RUSA, CPE, UGC, Autonomous Grant, Bank transaction ಹಾಗೂ ಇತರೆ ಪತ್ರ ವ್ಯವಹಾರಗಳನ್ನು ಮಾಡಲು Mr. Sharath M.C ರವರು ನಿರ್ವಹಿಸುವ ಬಗೆಗೆ. |
| ತೀರ್ಮಾನ | Mr. Sharath M.C ರವರು RUSA, CPE, UGC, Autonomous Grant, Bank transaction ಹಾಗೂ ಇತರೆ ಪತ್ರ ವ್ಯವಹಾರಗಳ ಕಾರ್ಯಭಾರವನ್ನು ನಿರ್ವಹಿಸಿಕೊಂಡು ಹೋಗಲು ಸಭೆಯ ಒಪ್ಪಿತು. |

ಇತರೆ:-

1. ಪರೀಕ್ಷಾ ನಿಯಂತ್ರಣಾಧಿಕಾರಿಗಳ ನೇಮಕಾತಿ ಬಗ್ಗೆ Seniority ಪರಿಗಣಿಸಲು ಮಾನ್ಯ ಕುಲಪತಿಗಳು ಸೂಚಿಸಿದರು, ಅದನ್ನು ಸಮಿತಿಯು ಒಪ್ಪಿತು.
2. ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಿರುವಲ್ಲಿ ಮುಖ್ಯಸ್ಥರು ಮತ್ತು ಸಂಯೋಜಕರಾಗಿ ನೇಮಿಸಲು ಮಾನ್ಯ ಕುಲಪತಿಗಳು ಸೂಚಿಸದರು.

12/2/23

ಪ್ರಾಂಶುಪಾಲರು
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

16/2/2023

ಅಧ್ಯಕ್ಷರು/ಮಾನ್ಯ ಕುಲಪತಿಗಳು
ಕಾಲೇಜಿನ ಆಡಳಿತ ಮಂಡಳಿ ಸಮಿತಿ,
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.